<u>**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**</u>

<u>**ಸಿಸಿ ಸಂಖ್ಯೆ 2163/2021**</u> **CW**-1 **PW**-1

<u>**ಸಾಕ್ಷಿಯನ್ನು ದಿಃ 13.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**</u>

| | |
|---|---|
| ಹೆಸರುಃ | ರಾಜೇಗೌಡ |
| ತಂದೆಯ ಹೆಸರುಃ | ಕಪನೀಗೌಡ |
| ವಯಸ್ಸುಃ | 60 ವರ್ಷ |
| ವೃತ್ತಿಃ | ವ್ಯವಸಾಯ |
| ವಾಸ ಸ್ಥಳಃ | ಗೌಡಗೆರೆ ಗ್ರಾಮ |

<u>**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**</u>

ನನಗೆ ಚಾಸಾ-2 ರಿಂದ ಚಾಸಾ-5 ರವರ ಪರಿಚಯವಿದೆ. ಆರೋಪಿತರ ಸಂಬಂಧಿಕರು.

ದಿಃ 26.07.2021 ರಂದು ಸಂಜೆ 6.30 ರ ಸಮಯದಲ್ಲಿ ಸರ್ವೆ ನಂಬರ್ 135/2 ರಲ್ಲಿ ಆರೋಪಿತರು ಕೆಲಸ ಮಾಡಲು ಬಂದಿದ್ದು ಆ ಸಮಯದಲ್ಲಿ ನಾನು ಕೆಲಸ ಮಾಡಬೇಡಿ ಇದು ನನ್ನ ಜಮೀನು ಎಂದು ಪ್ರಶ್ನಿಸಿದಾಗ 1ನೇ ಆರೋಪಿ ನನ್ನ ಹೊಟ್ಟೆಗೆ, ಬೆನ್ನಿಗೆ ಹೊಡೆದಿರುತ್ತಾರೆ. ನೋವುಂಟುಮಾಡಿರುತ್ತಾರೆ. 2 ನೇ ಆರೋಪಿ ನನ್ನ ತಲೆಯನ್ನು ಹಿಡಿದುಕೊಂಡು ನನ್ನ ತಲೆಗೆ ಹೋಡೆದಿರುತ್ತಾರೆ. ನಂತರ ನಾನು 27.07.2021 ರಂದು ಪೊಲೀಸ್ ಠಾಣೆ ಬಂದು ದೂರನ್ನು ನೀಡಿರುತ್ತೇನೆ.

ಸಾಕ್ಷಿ ದೂರನ್ನು ತೋರಿಸಲಾಗಿ, ಅದನ್ನು ಅವರು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದಿಃ 28.07.2021 ರಂದು ಬೆಳಿಗ್ಗೆ 11.30 ರ ಸಮಯದಲ್ಲಿ ಸ್ಥಳಕ್ಕೆ ಬಂದು ಆ ಸಮಯದಲ್ಲಿ ನಾನು ಪೊಲೀಸರಿಗೆ ಸ್ಥಳವನ್ನು ತೋರಿಸಿರುತ್ತೇನೆ. ನನ್ನ ಸಮಕ್ಷಮ ಪೊಲೀಸರು ಮಹಜರು ಕ್ರಮವನ್ನು ಬೆಳಿಗ್ಗೆ 11 ರಿಂದ 11.30 ರವರೆಗೆ ಮಾಡಿರುತ್ತಾರೆ.

ನನ್ನ ಜೊತೆ ಚಾಸ-3,4 ಮತ್ತು 5 ರವರು ಸಹಿ ಮಾಡಿರುತ್ತಾರೆ.

ಸಾಕ್ಷಿಗೆ ಸ್ಥಳ ಮಹಜರ್ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 2 ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. (1ನೇ ಆರೋಪಿ ಗೈರು ಹಾಜರಿದ್ದು ಆರೋಪಿ ಪರ ವಕೀಲರು ಆರೋಪಿಯನ್ನು ಗುರುತಿಸುವ ಬಗ್ಗೆ ತಕರಾರು ಇಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ).

**(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

1ನೇ ಆರೋಪಿ ನನ್ನನು ಅಡ್ಡಗಟ್ಟಿ ಅವ್ಯಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. 1ನೇ ಆರೋಪಿ ನನ್ನ ಎಡ ಮತ್ತು ಬಲ ಕಪಾಳಕ್ಕೆ ಹೊಡೆದಿರುತ್ತಾರೆ ಎಂದರೆ ಸರಿ. ಮಹಜರು ಸಮಯ ಬೆಳಿಗ್ಗೆ 11.15 ರಿಂದ 11.45 ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಬಿ ವಿ ವಿ ರವರಿಂದ ಃ</u>**

1ನೇ ಆರೋಪಿಗೆ ನಾನು ಸೋದರ ಮಾವ ಎಂದರೆ ಸರಿ. ಗಲಾಟೆ ನಡೆದ ಜಮೀನನ್ನು ಒಂದನೇ ಆರೋಪಿ ಉಳಿಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಜಮೀನಿನ ವಿಚಾರವಾಗಿ ನನಗೂ ಒಂದನೇ ಆರೋಪಿಗೂ ಮನಸ್ತಾಪ ಇದೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣ ಹೂಡುವುದಕ್ಕೂ ಮೊದಲು 2ನೇ ಆರೋಪಿ ನನ್ನ ಹಾಗೂ ನನ್ನ ಕುಟುಂಬದ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು ಎಂದರೆ ಸರಿ. ಎರಡನೇ ಆರೋಪಿ ನಮ್ಮ ವಿರುದ್ಧ ದೂರು ನೀಡಿದ್ದರಿಂದ ಅವರ ವಿರುದ್ಧ ಪೊಲೀಸರೊಂದಿಗೆ ಷರೀಖು ಆಗಿ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ತೆಯನ್ನು ಪಡೆದಿಲ್ಲ. ನನಗೆ ಚಿಕಿತ್ಸೆ ಪಡೆಯುವಷ್ಟು ಯಾವುದೇ ಗಾಯ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಬೈದಿಲ್ಲ ಮತ್ತು

ಹೊಡೆದಿಲ್ಲ ಎಂದರೆ ಸರಿಯಲ್ಲ. ಚಾಸ–4 ಮತ್ತು 5 ರವರು ನಮ್ಮ ಊರಿನವರೇ ಎಂದರೆ ಸರಿ. ಪೊಲೀಸರು ಬಂದಾಗ ಅವರೇ ಅಲ್ಲಿಗೆ ಬಂದಿದ್ದರು. ಮತ್ತೊಬ್ಬ ಮಂಜು ಸಹ ಅಲ್ಲಿಯೇ ಇದ್ದರು. ನಿಪಿ–2ಕ್ಕೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಆ ದಿನ ಮಹಜರು ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಗಳಿಗೆ ತೊಂದರೆ ಮಾಡಲು ಸುಳ್ಳು ದೂರು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ .)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**